

# ಅವಧಿಪೂರ್ವ ಮಗು ಆತಂಕಗಳೇನು?

ಮಗು ಅವಧಿಗೆ ಮೊದಲೇ ಜನಿಸಿದಾಗ ಹಲವು ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನವಜಾತ ಶಿಶುಗಳಿಗಾಗಿಯೇ ಇರುವ 'ಎನ್‌ಐಸಿಯುವಿ'ನಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭ ಎದುರಾಗಬಹುದು.

■ ಉಮಾ ಅನಂತ್

ಪುಣೆ ಸಮೀಪದ ಒಂದು ಹಳ್ಳಿ. ತುಂಬು ಗರ್ಭಿಣಿಗೆ ಹೆರಿಗೆ ಸಮಯ. ಪಕ್ಕದಲ್ಲಿ ಎಲ್ಲೂ ಸುಸಜ್ಜಿತ ಆಸ್ಪತ್ರೆ ಇಲ್ಲ. ಅಂತೂ ಅಲ್ಲೇ ಇದ್ದ ಚಿಕ್ಕ ಆಸ್ಪತ್ರೆಯೊಂದರಲ್ಲಿ ಮಗು ಜನಿಸಿತು. ಆದರೆ ಮಗು ಜನಿಸುವ ಮುನ್ನವೇ ತಾಯಿ ಗರ್ಭದೊಳಗೆ ಮಲ ವಿಸರ್ಜಿಸಿ ಅದನ್ನೇ ಸೇವಿಸಿಬಿಟ್ಟಿತ್ತು. ಈ ಕಾರಣ ಮಗು ಹುಟ್ಟಿದ ಕೂಡಲೇ ಶಿಶುವಿಗೆ ಉಸಿರಾಟದ ಸಮಸ್ಯೆ ಉಂಟಾಗಿತ್ತು, ಜೊತೆಗೆ ಎಡಗಾಲಿನಲ್ಲಿ ರಕ್ತ ಹೆಪ್ಪುಗಟ್ಟಿತ್ತು. ತಕ್ಷಣ ಆ ಆಸ್ಪತ್ರೆ ಸಿಬ್ಬಂದಿ ಬೆಂಗಳೂರಿನ ಮದರ್‌ಹುಡ್ ಆಸ್ಪತ್ರೆಯ ವರ್ಚುವಲ್ ನಿಯೊನಾಟಲ್ ಸಿಬ್ಬಂದಿಯನ್ನು ಸಂಪರ್ಕಿಸಿತು. ಆ ಕೂಡಲೇ ಕಾರ್ಯಪ್ರವೃತ್ತವಾದ ವರ್ಚುವಲ್ ವೈದ್ಯಕೀಯ ವ್ಯವಸ್ಥೆಯಿಂದ ಮಗು ಪ್ರಾಣಾಪಾಯದಿಂದ ಪಾರಾಗಿತ್ತು. ತಾಯಿ ಗರ್ಭದಲ್ಲಿ ಒಂಬತ್ತು ತಿಂಗಳು ಇದ್ದ ಮಗು ಹೆರಿಗೆಯ ದಿನ ಅಥವಾ ಸನಿಹದ ದಿನ ಜನಿಸಿದರೆ ಅದು ಸಹಜ ಮಗುವಾಗಿರುತ್ತದೆ. ಆದರೆ ಅವಧಿಗೂ ಮುನ್ನ ಅಕಾಲಿಕವಾಗಿ ಜನಿಸಿದರೆ ಅದು ಅವಧಿಪೂರ್ವ ಜನನ ಎನಿಸಿಕೊಳ್ಳುತ್ತದೆ.

ಗರ್ಭಾವಸ್ಥೆಯಲ್ಲಿ 37 ವಾರಗಳಿಗೂ ಮೊದಲೇ ಮಗು ಜನಿಸಿದರೆ ಅದೂ ಅಕಾಲಿಕ ಶಿಶು ಜನನ ಎನಿಸಿಕೊಳ್ಳುವುದು. ಒಂದು ಅಂದಾಜಿನ ಪ್ರಕಾರದಲ್ಲಿ ವಿಶ್ವದಲ್ಲಿ 10ರಲ್ಲಿ ಒಂದು ಮಗು ಅಕಾಲಿಕವಾಗಿ ಹುಟ್ಟುತ್ತದೆ.

ತಾಯಿಯ ಗರ್ಭದಿಂದ ಮಗು ಅವಧಿಪೂರ್ವ (ಪ್ರಿಮೆಚೂರ್)ವಾಗಿ ಜನಿಸಲು ಕಾರಣಗಳು ಹಲವಾರು. ಗರ್ಭಧಾರಣೆ ಸಮಯದಲ್ಲಿ ತಾಯಿಯ ಆರೋಗ್ಯದಲ್ಲಿ ಏರುಪೇರು, ಗರ್ಭಿಣಿಯ ಉಪಚಾರ ಸರಿಯಾಗಿ ಮಾಡದೇ ಇರುವುದು, ಕಾಲಕಾಲಕ್ಕೆ ಸೂಕ್ತ ಚುಚ್ಚುಮದ್ದು ತೆಗೆದುಕೊಳ್ಳದೇ ಇರುವುದು, ಡಯಾಬಿಟಿಸ್, ಹೈಪರ್‌ಟೆನ್ಶನ್‌ನಂತಹ ಸಮಸ್ಯೆ, ಗರ್ಭಿಣಿಯರಲ್ಲಿ ಅತಿಯಾಗಿ ತೂಕ, ಅತಿ ಹೆಚ್ಚು ಕಾಫಿ– ಚಹಾ ಸೇವನೆ, ಧೂಮಪಾನ ಮದ್ಯಪಾನದಂತಹ ಚಟ... ಇವೇ ಮುಂತಾದವು. ಜತೆಗೆ ಮಗು ಜನಿಸುವ ಸಮಯದಲ್ಲಿ ಗರ್ಭಾಶಯದಲ್ಲಿ ನೀರು ಕಡಿಮೆಯಾಗಿರುವುದು, ಮಗುವಿನ ಕರುಳಬಳ್ಳಿ ಕುತ್ತಿಗೆಗೆ ಸುತ್ತಿಕೊಂಡಿರುವುದು... ಇವೇ ಕಾರಣಗಳಿಗೆ ಮಗು ಅವಧಿಪೂರ್ವವಾಗಿ